ದೊರಕಿದ ಕೂಡಲೇ ಕಟ್ಟಡದ ಕೆಲಸವನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಅಧ್ಯಕ್ಷರೆ, ಗ್ರಂಥಪಾಲಕರ ಮತ್ತು ಪುಸ್ತಕಗಳ ಕೊರತೆ ಇರುವುದನ್ನು ನೀಗಿಸುವುದು ತಮಗೆ ಆಗುವುದಿಲ್ಲವೆ? ನಾವು ಜಾಗವನ್ನು ಕೊಟ್ಟ ಮೇಲೆ ಕಟ್ಟಡ ಕಟ್ಟಿಸಿ ಕೊಡಿ, ಆದರೆ ಅದಕ್ಕಿಂತ ಮುಂಚಿತವಾಗಿ ನಾವು ಮೇಲ್ಕಾಣಿಸಿದ ಕೊರತೆಯನ್ನು ತಾವು ಆದಷ್ಟು ಬೇಗ ನೀಗಿಸಬೇಕೆಂದು ತಮ್ಮ ಮೂಲಕ ಸಚಿವರಿಗೆ ತಿಳಿಸಬಯಸುತ್ತೇನೆ.

ಶ್ರೀ ಆರ್.ಕೃಷ್ಣಪ್ಪ: ಅಧ್ಯಕ್ಷರೆ, ಗ್ರಂಥಪಾಲಕರ ಹುದ್ದೆ ತಾಲ್ಲೂಕು ಮಟ್ಟದಲ್ಲಿ ಬರುವುದಿಲ್ಲ. ಅಲ್ಲಿ ಈಗಾಗಲೇ ಸಹಾಯಕ ಗ್ರಂಥ ಪಾಲಕರು ಇದ್ದಾರೆ. ಅಲ್ಲಿ ಮುನಿಸಿಪಾಲಿಟಿಯವರು ಕೊಟ್ಟಿರುವ ಕಟ್ಟಡ ಹಳೆಯದಾಗಿದೆ. ಆದ್ದರಿಂದ ಹೊಸ ಕಟ್ಟಡ ಕಟ್ಟುವುದಕ್ಕೆ ಅವರು ಜಾಗ ಕೊಡುತ್ತೇನೆ ಎಂದರು, ಇನ್ನೂ ಜಾಗ ಕೊಟ್ಟಿಲ್ಲ. ಅವರು ಜಾಗ ಕೊಟ್ಟ ನಂತರ ಕಟ್ಟಡವನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೇವೆ.

ಗೇರುಸೊಪ್ಪಾದಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆ ಸ್ಥಾಪನೆ,

24(145)

ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕಿನ ಗೇರಸೊಪ್ಪಾದಲ್ಲಿ ಹೊಸ ಸರ್ಕಾರಿ ಪ್ರೌಢಶಾಲೆ ಸ್ಥಾಪನೆಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೆ?

ಆ) ಬಂದಿದ್ದಲ್ಲಿ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಇ) 1997-98ನೇ ಸಾಲಿನಲ್ಲಿ ಗೇರುಸೊಪ್ಪದಲ್ಲಿ ಪ್ರೌಢಶಾಲೆ ಸ್ಥಾಪನೆಗೆ ಮಂಜೂರಾತಿ ನೀಡಲಾಗುವುದೇ?

ಈ) ಇಲ್ಲದಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

ಅ) ಇಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಶ್ರೀ ಶಿವಾನಂದ ನಾಯಕ್: ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. 1994ರಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯಿಲಿಯವರ ಶಿಫಾರಸು ಪತ್ರ ಕೂಡ ಇಲ್ಲಿದೆ. ಆ ಶಾಲೆಗಾಗಿ 10 ಎಕರೆ ಜಮೀನು ಕೂಡ ಮಂಜೂರಾತಿ ಆಗಿದೆ. ಹಾಗೂ ಅದಕ್ಕೆ ಬೇಕಾಗಿರುವ ಠೇವಣಿ ಹಣವನ್ನು ಕೂಡ ಸಂಗ್ರಹ ಮಾಡಿದ್ದಾರೆ. ಆ ಭಾಗದಲ್ಲಿ ಸುಮಾರು 18 ಕಿ.ಮೀ. ದೂರದಲ್ಲಿ ಯಾವ ಶಾಲೆಗಳೂ ಇಲ್ಲ. ಅಲ್ಲಿ ವಾಸಿಸುವಂಥ ಜನರು ಗುಡ್ಡಗಾಡು ಜನರು ಆಗಿದ್ದಾರೆ. ಆದ್ದರಿಂದ ಆ ಶಾಲೆಗೆ ಈ ವರ್ಷ ಮಂಜೂರಾತಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಪರಿಶೀಲನೆ ಮಾಡಿ ನೋಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಸದಸ್ಯರು ಹತ್ತಿರದಲ್ಲಿ ಯಾವುದೇ ಹೈಸ್ಕೂಲ್ ಇಲ್ಲ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡಿ ನೋಡುತ್ತೇನೆ. ಅವಶ್ಯಕತೆ ಇದ್ದರೆ ಖಂಡಿತವಾಗಿ ಕೊಡುತ್ತೇವೆ. ಏಕೆಂದರೆ ಸರ್ಕಾರದ ಉದ್ದೇಶ ಕೂಡ ಈ ನಿಟ್ಟಿನಲ್ಲಿ ಇರುವುದರಿಂದ ಇದನ್ನು ಪರಿಶೀಲನೆ ಮಾಡಿ ನೋಡುತ್ತೇವೆ.

ಚಾಮರಾಜನಗರದಲ್ಲಿ ಕೊಳವೆ ಬಾವಿಗಳು ಕೆಟ್ಟಿರುವುದು

25 (76)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರವೂ ಸೇರಿದಂತೆ ಚಾಮರಾಜನಗರದಲ್ಲಿ ಸುಮಾರು 300ಕ್ಕೂ ಹೆಚ್ಚು ಕೊಳವೆಬಾವಿಗಳು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕರ್ನಾಟಕ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳನ್ನು ದುರಸ್ತಿಮಾಡಲು ಸರ್ಕಾರದವರು ಕೈಗೊಂಡಿರುವ ತೀವ್ರ ಕ್ರಮಗಳೇನು?